# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 49 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19.12.2022 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ ಸಂ | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಆಶಾ ಕಾರ್ಯಕರ್ತೆಯರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಶಾ ಕಾರ್ಯಕರ್ತೆಯರ ಸಂಖ್ಯೆ 41,271.<br><br>ಜಿಲ್ಲಾವಾರು ಮಾಹಿತಿಯನ್ನು **ಅನುಬಂದ-1ರಲ್ಲಿ** ನೀಡಲಾಗಿದೆ. |
| ಆ) | ಇವರಿಗೆ ನೀಡುತ್ತಿರುವ ಗೌರವಧನವೆಷ್ಟು; ಗೌರವಧನದ ಜೊತೆಗೆ ಇನ್ನಿತರ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುತ್ತಿದೆ (ವಿವರ ನೀಡುವುದು) | ಆಶಾ ಕಾರ್ಯಕರ್ತೆಯು ಮಾನ್ಯತೆ ಪಡೆದ ಸಾಮಾಜಿಕ ಆರೋಗ್ಯ ಕಾರ್ಯಕರ್ತೆಯಾಗಿದ್ದು, ಸ್ವಯಂ ಪ್ರೇರಿತ ನೆಲೆಗಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾಳೆ, ವಿಶೇಷ ಮತ್ತು ತುರ್ತು ವೈದ್ಯಕೀಯ ಪರಿಸ್ಥಿತಿಗಳನ್ನು ಹೊರತುಪಡಿಸಿ ಸೀಮಿತ ಅವಧಿಯ ಕರ್ತವ್ಯ ನಿರ್ವಹಣೆಯ ಸ್ವರೂಪದ್ದಾಗಿರುತ್ತದೆ (ದಿನಕ್ಕೆ 2-3 ಗಂಟೆ). ಇವರಿಗೆ ಕೆಳಕಂಡ ಗೌರವಧನ ಮತ್ತು ಪ್ರೋತ್ಸಾಹಧನಗಳನ್ನು ನೀಡಲಾಗುತ್ತಿದೆ.<br><br>• ರಾಜ್ಯ ಸರ್ಕಾರದಿಂದ ಮಾಸಿಕ ನಿಶ್ಚಿತ ಗೌರವಧನವನ್ನು ಏಪ್ರಿಲ್-2022ರ ಮಾಹೆಯಿಂದ ರೂ.5000/-ಗಳನ್ನು ನೀಡಲಾಗುತ್ತಿದೆ.<br>• ರಾಷ್ಟ್ರೀಯ ಆರೋಗ್ಯ ಅಭಿಯಾನದಿಂದ ಎಂಟು ಆವರ್ತಕ ಮತ್ತು ನಿಯಮಿತ ಚಟುವಟಿಕೆಗಳಿಗೆ ಮಾಸಿಕ ನಿಶ್ಚಿತ ಪ್ರೋತ್ಸಾಹಧನ ರೂ.2000/-ಗಳನ್ನು ನೀಡಲಾಗುತ್ತಿದೆ.<br>• ಕೋವಿಡ್-19ರ ನಿಯಂತ್ರಣ ಚಟುವಟಿಕೆಗಳಿಗೆ ಮಾಸಿಕ ಪ್ರೋತ್ಸಾಹಧನ ರೂ.1000/-ಗಳನ್ನು ಮಾರ್ಚ್-2020 ರಿಂದ ಮಾರ್ಚ್-2022 ರವರೆಗೆ ನೀಡಲಾಗಿದೆ.<br>• ಮೇಲ್ಕಂಡ ನಿಶ್ಚಿತ ಗೌರವಧನ ಮತ್ತು ಪ್ರೋತ್ಸಾಹಧನವನ್ನು ಹೊರತುಪಡಿಸಿ 30 ಚಟುವಟಿಕೆಗಳಿಗೆ ಕಾರ್ಯಕ್ಷಮತೆಯ ಆಧಾರದ ಮೇಲೆ ಕಾರ್ಯನಿರ್ವಹಣಾ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ನೀಡಲಾಗುತ್ತಿರುವ ಪ್ರೋತ್ಸಾಹಧನದ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.<br>• ಆಶಾ ಕಾರ್ಯಕರ್ತೆಯರಿಗೆ ಸನ್ಮಾನ್ಯ ಪ್ರಧಾನ ಮಂತ್ರಿಗಳ ಸಾಮಾಜಿಕ ಸುರಕ್ಷಾ ವಿಮಾ ಯೋಜನೆಗಳಾದ ಪ್ರಧಾನ ಮಂತ್ರಿ ಜೀವನ ಜ್ಯೋತಿ ಭೀಮಾ ಯೋಜನಾ ಮತ್ತು ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಯಡಿ ತಲಾ ರೂ. 2,00,000/-ಗಳ ವಿಮಾ ಸೌಲಭ್ಯವನ್ನು ನೀಡಲಾಗಿದೆ.<br>• ಅಸಂಘಟಿತ ವಲಯದ ಕಾರ್ಮಿಕರಿಗೆ ಪಿಂಚಣಿ ನೀಡಲು ರೂಪಿಸಿರುವ ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ ಧನ್ ಯೋಜನೆಯ ವ್ಯಾಪ್ತಿಗೆ ಆಶಾ ಕಾರ್ಯಕರ್ತೆಯರನ್ನು ತರಲಾಗಿದೆ. ಈ ಯೋಜನೆಗೆ ಸೇರ್ಪಡೆಯಾಗುವ ಆಶಾ ಕಾರ್ಯಕರ್ತೆಯರು ಶೇ.50 ರಷ್ಟು ವಂತಿಗೆಯನ್ನು ಭರಿಸಬೇಕಾಗಿದ್ದು, ಇನ್ನುಳಿದ ಶೇ.50 ರಷ್ಟು ವಂತಿಗೆಯನ್ನು ಕೇಂದ್ರ ಸರ್ಕಾರವು ಭರಿಸಲಿದೆ. |

| | | |
|---|---|---|
| ಇ) | ಆಶಾ ಕಾರ್ಯಕರ್ತೆಯರಿಗೆ ಕೋವಿಡ್ ಸಂದರ್ಭವಲ್ಲದೆ ಇತರೆ ಸಮಯದಲ್ಲೂ ಹಾಗೂ ಹಗಲಿರುಳು ನಿರಂತರ ಸೇವೆ ಸಲ್ಲಿಸುತ್ತಿರುವ ಮತ್ತು ತಾಲ್ಲೂಕು ಮಟ್ಟದ ಪಂಚಾಯಿತಿ ಮಟ್ಟದ ಹಲವಾರು ಕಾರ್ಯಗಳಿಗೆ ಇವರ ಸೇವೆಯನ್ನು ಬಳಸಿಕೊಳ್ಳುತ್ತಿರುವ ಇವರಿಗೆ ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡುವ ವೇತನ ಸಹಾಯಧನ ಮತ್ತು ಸೇವಾ ಭದ್ರತೆಯನ್ನು ನೀಡಲು ಸರ್ಕಾರಕ್ಕಿರುವ ತೊಂದರೆಯೇನು; ಈ ಬಗ್ಗೆ ಸರ್ಕಾರ ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವುದೇ; | ಆಶಾ ಕಾರ್ಯಕರ್ತೆಯರ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಕಾರ್ಯನಿರ್ವಹಣಾ ಸ್ವರೂಪವು ಸಂಪೂರ್ಣವಾಗಿ ವಿಭಿನ್ನವಾಗಿರುತ್ತದೆ. ಆಶಾ ಕಾರ್ಯಕರ್ತೆಯರ ಕಾರ್ಯಚಟುವಟಿಕೆಗಳು ಚಟುವಟಿಕೆ ಆಧಾರಿತವಾಗಿದ್ದು, ಪೂರ್ಣಾವಧಿ ಸ್ವರೂಪದಲ್ಲಿದರುವುದಿಲ್ಲ. |
| ಈ) | ಇತ್ತೀಚೆಗೆ ಪೌರ ಕಾರ್ಮಿಕರನ್ನು ಖಾಯಂಗೊಳಿಸಿ, ಸರ್ಕಾರಿ ನೌಕರರೆಂದು ಪರಿಗಣಿಸಿರುವ, ರೀತ್ಯಾ ಕೇವಲ ಅಲ್ಪ ಸಂಖ್ಯೆಯಲ್ಲಿರುವ ಈ ಆಶಾ ಕಾರ್ಯಕರ್ತೆಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ವೇತನ ಪಾವತಿಸಲು ಸರ್ಕಾರ ತೀರ್ಮಾನಿಸಿ ಆದೇಶ ಹೊರಡಿಸುವುದೇ? (ಮಾಹಿತಿ ನೀಡುವುದು) | ರಾಷ್ಟ್ರೀಯ ಆರೋಗ್ಯ ಅಭಿಯಾನವು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಇದೊಂದು ಅಭಿಯಾನ ಸ್ವರೂಪಿ ಯೋಜನೆಯಾಗಿದೆ. ಈ ಯೋಜನೆಯಡಿ ಆಶಾ ಕಾರ್ಯಕರ್ತೆಯರನ್ನು ಆಯ್ಕೆ ಮಾಡಲಾಗಿದ್ದು, ಸರ್ಕಾರಿ ನೌಕರರೆಂದು ಪರಿಗಣಿಸುವುದು ಕೇಂದ್ರ ಸರ್ಕಾರದ ನೀತಿ ನಿರೂಪಣಾ ಕ್ರಮಗಳನ್ನು ಅವಲಂಬಿಸಿದೆ. |

**ಸಂಖ್ಯೆ: ಆಕುಕ 101 ಎಸ್.ಟಿ.ಕ್ಯೂ 2022**

**(ಡಾ|| ಕೆ.ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

Annexure-1 (LQ-49)

| ASHA Working Status as on 30.11.2022 | | | | |
|---|---|---|---|---|
| Sl. No | Name of the District | Total (Rural+Urban) | | |
| | | Sanctioned | Working | Vacant |
| 1 | Bagalkot | 1447 | 1440 | 7 |
| 2 | Ballari | 1041 | 1000 | 41 |
| 3 | BBMP | 1229 | 1123 | 106 |
| 4 | Belagavi | 3862 | 3810 | 52 |
| 5 | Bengaluru Rural | 834 | 807 | 27 |
| 6 | Bengaluru Urban | 873 | 787 | 86 |
| 7 | Bidar | 1362 | 1338 | 24 |
| 8 | Chamarajanagar | 800 | 785 | 15 |
| 9 | Chikkaballapur | 1064 | 1030 | 34 |
| 10 | Chikkamagalur | 959 | 939 | 20 |
| 11 | Chitradurga | 1481 | 1464 | 17 |
| 12 | Dakshina Kannada | 1381 | 1359 | 22 |
| 13 | Davanagere | 1228 | 1197 | 31 |
| 14 | Dharwad | 1033 | 1014 | 19 |
| 15 | Gadag | 767 | 739 | 28 |
| 16 | Hassan | 1498 | 1472 | 26 |
| 17 | Haveri | 1501 | 1453 | 48 |
| 18 | Kalaburagi | 1899 | 1835 | 64 |
| 19 | Kodagu | 502 | 493 | 9 |
| 20 | Kolar | 974 | 926 | 48 |
| 21 | Koppal | 1343 | 1281 | 62 |
| 22 | Mandya | 1397 | 1379 | 18 |
| 23 | Mysuru | 1839 | 1782 | 57 |
| 24 | Raichur | 1508 | 1455 | 53 |
| 25 | Ramanagar | 879 | 815 | 64 |
| 26 | Shivamogga | 1362 | 1310 | 52 |
| 27 | Tumkur | 2154 | 2100 | 54 |
| 28 | Udupi | 1028 | 992 | 36 |
| 29 | Uttara Kannada | 1400 | 1382 | 18 |
| 30 | Vijayanagar | 1047 | 1021 | 26 |
| 31 | Vijayapura | 1808 | 1761 | 47 |
| 32 | Yadgir | 1024 | 982 | 41 |
| | **TOTAL** | **42524** | **41271** | **1253** |

ನಿರ್ದೇಶಕರು
ಆರೋಗ್ಯ ಮತ್ತು ಕು.ಕ.ಸೇವೆಗಳು
ಬೆಂಗಳೂರು

## ಅನುಬಂಧ-2 ((LQ-49))

### ಆಶಾ ಕಾರ್ಯಕರ್ತೆಯರಿಗೆ ನೀಡಲಾಗುವ ಪ್ರೋತ್ಸಾಹಧನ ಮತ್ತು ಚಟುವಟಿಕೆಗಳು:

### ಎ. ಆವರ್ತಕ ಮತ್ತು ನಿಯಮಿತ ಚಟುವಟಿಕೆಗಳು

| ಕ್ರ.ಸಂ | ಚಟುವಟಿಕೆ | ಪ್ರೋತ್ಸಾಹಧನದ ಮೊತ್ತ (ರೂಪಾಯಿಗಳಲ್ಲಿ) |
|---|---|---|
| 1 | ಗ್ರಾಮ ಆರೋಗ್ಯ ಮತ್ತು ಪೌಷ್ಟಿಕ ಆಹಾರ ದಿನಾಚರಣೆಯಲ್ಲಿ ಭಾಗಿಯಾದರೆ | 200 |
| 2 | ಪ್ರಾಥಮಿಕ ಆರೋಗ್ಯ ಕೇಂದ್ರದ ಮಾಸಿಕ ಸಭೆಗೆ ಹಾಜರಾದರೆ | 150 |
| 3 | ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಹಾಗೂ ಪೌಷ್ಟಿಕಾಂಶ ಸಮಿತಿ ಸಭೆಯನ್ನು ನಡೆಸಿದರೆ . | 150 |
| 4 | ಗರ್ಭಿಣಿಯರ ಪಟ್ಟಿಯ ನಿರ್ವಹಣೆ | 300 |
| 5 | ಅರ್ಹದಂಪತಿಗಳ ಪಟ್ಟಿಯನ್ನು ತಯಾರಿಸುವುದು | 300 |
| 6 | ಮನೆ-ಮನೆ ಸಮೀಕ್ಷೆ | 300 |
| 7 | ಗ್ರಾಮ ಆರೋಗ್ಯ ಪುಸ್ತಕದ ನಿರ್ವಹಣೆಗೆ | 300 |
| 8 | ಚುಚ್ಚುಮದ್ದು ಸೇವೆಗಳಿಗೆ ಅರ್ಹ ಮಕ್ಕಳ ಪಟ್ಟಿಯನ್ನು ತಯಾರಿಸಿದರೆ | 300 |

### ಬಿ. ಕಾರ್ಯನಿರ್ವಹಣಾ ಪ್ರೋತ್ಸಾಹಧನಗಳು

| ಕ್ರ.ಸಂ | ಚಟುವಟಿಕೆ | ಪ್ರೋತ್ಸಾಹಧನದ ಮೊತ್ತ (ರೂಪಾಯಿಗಳಲ್ಲಿ) |
|---|---|---|
| 1. | ಗರ್ಭಿಣಿ ಆರೈಕೆಗೆ | 300 |
| 2. | ಸಾಂಸ್ಥಿಕ ಹೆರಿಗೆಯನ್ನು ಉತ್ತೇಜಿಸಿದರೆ | 300 |
| 3. | ತಾಯಿ ಮರಣದ ವರದಿ | 200 |
| 4. | ಗೃಹಾಧಾರಿತ ನವಜಾತ ಶಿಶು ಆರೈಕೆ | 250 |
| 5. | ಕಡಿಮೆ ಹುಟ್ಟುತೂಕದ ಮಕ್ಕಳ ಅನುಸರಣೆ | 50 |
| 6. | ಎಸ್.ಎನ್.ಸಿ.ಯುವಿನಿಂದ ಬಿಡುಗಡೆಯಾದ ಮಕ್ಕಳ ಅನುಸರಣೆ | 50 |
| 7. | ಮಾಕಾರ್ಯಕ್ರಮದಡಿ ಬೆಂಬಲ ಗುಂಪುಗಳ ಸಭೆಯನ್ನು ನಡೆಸಲು | 100 |
| 8. | ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಗುರುತಿಸುವುದು ಮತ್ತು ಆರೋಗ್ಯ ಸಂಸ್ಥೆಗಳಿಗೆ ಶಿಫಾರಸು ಮಾಡುವುದು. | 150 |
| 9. | ಚುಚ್ಚುಮದ್ದು ಸೇವೆಗಳಿಗೆ ಫಲಾನುಭವಿಗಳನ್ನು ಸಂಟಿಸುವುದು. | 150 |
| 10. | ಮೊದಲ ವರ್ಷದ ಚುಚ್ಚುಮದ್ದು ಸೇವೆಗಳಿಗೆ | 100 |
| 11. | ಎರಡನೇ ವರ್ಷದ ಚುಚ್ಚುಮದ್ದು ಸೇವೆಗಳು | 75 |

| | | |
|---|---|---|
| 12. | 5–6 ವರ್ಷದ ಮಕ್ಕಳಿಗೆ ಡಿ.ಪಿ.ಟಿ ಬೂಸ್ಟರ್ ಲಸಿಕೆಯನ್ನು ಕೊಡಿಸಿದರೆ | 50 |
| 13. | ಪಿ.ಪಿ.ಐ.ಯು.ಸಿ.ಡಿ ಯನ್ನು ಅಳವಡಿಸಿಕೊಳ್ಳಲು ಉತ್ತೇಜಿಸಿದರೆ | 150 |
| 14. | ಪುರುಷರನ್ನು ಸಂತಾನ ನಿರೋಧಚಿಕಿತ್ಸೆಗೆ ಉತ್ತೇಜಿಸಿದರೆ | 200 |
| 15. | ಸ್ತ್ರೀಯರನ್ನು ಸಂತಾನ ನಿರೋಧಚಿಕಿತ್ಸೆಗೆ ಉತ್ತೇಜಿಸಿದರೆ | 150 |
| 16. | ವೈದ್ಯಕೀಯ ಗರ್ಭಪಾತಕ್ಕೆ ಉತ್ತೇಜಿಸಿದರೆ | 100 |
| 17. | ಎರಡು ಜನನದ ನಡುವೆ ಅಂತರವನ್ನು ಖಾತ್ರಿಪಡಿಸಿದರೆ | 500 |
| 18. | ಪಿ.ಎ.ಐ.ಯು.ಸಿ.ಡಿ ಅಳವಡಿಕೆಗೆ ಪ್ರೋತ್ಸಾಹಿಸುವುದು | 150 |
| 19. | ಕ್ಷಯ ರೋಗಿಗಳಿಗೆ ಆರೈಕೆ ಬೆಂಬಲದಾರರಾಗಿ ಬಹುವಿಧ ಔಷಧಿ ಕ್ಷಯರೋಗ ಚಿಕಿತ್ಸೆ ನೀಡಿದರೆ | 5000 |
| 20. | ಕ್ಷಯ ರೋಗಿಗಳಿಗೆ ಆರೈಕೆ ಬೆಂಬಲದಾರರಾಗಿ ಹೊಸ ಮತ್ತು ಹಿಂದಿನ ಆರೈಕೆ ಪ್ರಕರಣಗಳಿಗೆ ಚಿಕಿತ್ಸೆ ನೀಡಿದರೆ | 1500 |
| 21. | ಕ್ಷಯ ರೋಗಿಗಳಿಗೆ ಆರೈಕೆ ಬೆಂಬಲದಾರರಾಗಿ ಹೆಚ್–ಮಾನೋಪಲಿ ರೆಜಿಮನ್ ಪ್ರಕರಣಗಳಿಗೆ ಚಿಕಿತ್ಸೆ ನೀಡಿದರೆ | 1000 |
| 22. | ಕುಷ್ಠರೋಗಿಗಳಿಗೆ (ಎಂ.ಬಿ.ಪ್ರಕರಣಗಳು) ಚಿಕಿತ್ಸೆ ನೀಡಿದರೆ | 600 |
| 23. | ಕುಷ್ಠರೋಗಿಗಳಿಗೆ (ಪಿ.ಬಿ.ಪ್ರಕರಣಗಳು) ಚಿಕಿತ್ಸೆ ನೀಡಿದರೆ | 400 |
| 24. | ಕುಷ್ಠ ರೋಗಿಗಳನ್ನು ಗುರುತಿಸುವಿಕೆ | 250 |
| 25. | ಮಲೇರಿಯಾ ರೋಗಕ್ಕೆ ಚಿಕಿತ್ಸೆ | 50 |
| 26. | ಸಂಶಯಾಸ್ಪದ ಮಲೇರಿಯಾ ಪ್ರಕರಣಗಳ ಸ್ಲೈಡ್ ತಯಾರಿಸುವುದು | 150 |
| 27. | ಉಪ್ಪಿನ ಪರೀಕ್ಷೆ | 25 |
| 28. | ಹೆಚ್‌ಬಿವೈಸಿ | 250 |
| 29. | ಎನ್‌ಸಿಡಿ ಚಟುವಟಿಕೆಗಳು | 110 |
| 30. | ಅಂತರ ಚುಚ್ಚುಮದ್ದು ಪಡೆಯಲು ಅರ್ಹ ಫಲಾನುಭವಿಗಳನ್ನು ಪ್ರೇರೆಪಿಸಿದರೆ. | 100 |

ನಿರ್ದೇಶಕರು
ಆರೋಗ್ಯ ಮತ್ತು ಕು.ಕ.ಸೇವೆಗಳು
ಬೆಂಗಳೂರು